**ಕ್ರಿ.ಮಿಸ್. ನಂ. 382 /2016**
**ಆರ್.ಡಬ್ಲೂ : 1**

**ದಿನಾಂಕಃ 25-06-2025 ರಂದು ಸಾಕ್ಷಿದಾರನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ.ಬಿ.ಎಂ.ಆರ್. ವಕೀಲರಿಂದ :**

ನನ್ನ ಮದುವೆ ಸಂಬಂಧದಲ್ಲಿ ಆಗಿರುತ್ತದೆ, ಅರ್ಜಿದಾರಳು ನನಗೆ ಮೊದಲಿಂದಲೂ ಪರಿಚಯ ಇರುತ್ತದೆ. ಸಾಕ್ಷಿಯು ಮುಂದುವರೆದು ನಾವು ಪ್ರೀತಿಸಿ ಮದುವೆಯಾಗಿರುತ್ತೇವೆ. ನಾವು ರಜೀಸ್ಟರ ಮದುವೆಯಾಗಿರುವುದಿಲ್ಲ. ಹಿರಿಯರ ಒಪ್ಪಿಗೆ ಮೇರೆಗೆ ನಾವು ಮದುವೆಯಾಗಿರುತ್ತೇವೆ. ಮಾತು ಕತೆ ವೇಳೆಯಲ್ಲಿ ಅರ್ಜಿದಾರಳ ಮನೆಗೆ ನಾನು ಒಬ್ಬನೇ ಹೋಗಿರುತ್ತೇನೆ. ಈ ವಿಚಾರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮದುವೆ ಸಂಬಂಧ ಕೂಡುವ ವೇಳೆಯಲ್ಲಿ ವಧು-ವರ ಸಂಬಂಧಿಕರ ಜೊತೆ ಮಾತು ನಡೆಯುತ್ತವೆ ಎಂದರೆ ಸರಿ, ನಮ್ಮ ನಡುವೆ ಆಗಿರುವುದಿಲ್ಲ. ನಮ್ಮ ತಂದೆ ತಾಯಿ ವಿರುದ್ದ ನಾನು ಅರ್ಜಿದಾರಳ ವಿರುದ್ದ ಮದುವೆ ಆಗಿರುತ್ತೇನೆ. ನನ್ನ ಮದುವೆ ದೇವಸ್ಥಾನದಲ್ಲಿ ಆಗಿರುತ್ತದೆ. ಮದುವೆ ವೇಳೆಯಲ್ಲಿ ನಾನು ಆಮಂತ್ರಣ ಪತ್ರವನ್ನು ಮಾಡಿಸಿರುತ್ತೇನೆ. ನಮ್ಮ ಮದುವೆ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಮದುವೆಯಾದ ಗುಡಿಯಲ್ಲಿ ಸುಮಾರು 100 ಜನ ಸೇರಬಹುದು. ನನ್ನ ಮದುವೆಗೆ ಸುಮಾರು 25 ರಿಂದ 30 ಜನರು ಬಂದಿದ್ದರು. ಈ ವಿಚಾರವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮದುವೆ ವೇಳೆಯಲ್ಲಿ ಕೊಡುವುದು ತೆಗೆದುಕೊಳ್ಳುವುದು ಮಾತು ಕತೆ ಆಗಿತ್ತು ಎಂದರೆ ಸರಿಯಲ್ಲ. ಮದುವೆ ಬಟ್ಟೆಗಳನ್ನು ನನ್ನ ಸಾಲುವಾಗಿ ನಾನೇ ತಂದುಕೊಂಡಿರುತ್ತೇನೆ. ತಾಳಿಯನ್ನು ನಾನು ಹಾಗೂ ಅರ್ಜಿದಾರಳು ಇಬ್ಬರು ಸೇರಿ ತೆಗೆದುಕೊಂಡಿರುತ್ತೇವೆ, ಕಾಲುಂಗರ ನಾನು ತಂದಿರುತ್ತೇನೆ, ಇದನ್ನು ಬಿಟ್ಟರೇ ನಾನು ಬೇರೆ ಒಡವೆ ಹಾಕಿರುವುದಿಲ್ಲ ಎಂದರೆ ಸರಿ. ಮದುವೆ ವೇಳೆಯಲ್ಲಿ ಅರ್ಜಿದಾರಳ ಕುಟುಂಬದವರು ಏನು ಕೊಟ್ಟಿರುವುದಿಲ್ಲ. ಅರ್ಜಿದಾರಳು 25 ಸಾವಿರ, 2 ಲಕ್ಷ ಮದುವೆಗಾಗಿ, 30 ಸಾವಿರ ನಿಶ್ಚಿತಾರ್ಥಕ್ಕಾಗಿ, 8 ತೊಲಾ ಬಂಗಾರ ಕೊಟ್ಟಿರುತ್ತಾರೆ ಎಂದು ಆಧಾರ ಇರುವುದಿಲ್ಲ ಎಂದು ಹೇಳಿರುತ್ತೇನೆ, ಆದರೆ ಪ್ರತ್ತೇಕವಾಗಿ ನಿರಾಕರಿಸಿರುವುದಿಲ್ಲ. ಮದುವೆ ಸಮಯಕ್ಕೆ ಹಣ ಹಾಗೂ ಬಂಗಾರ, ಮನೆ ಬಳಕೆ ಸಾಮಾನುಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಣ, ಬಂಗಾರ, ಮನೆ ಬಳಕೆ ಸಾಮಾನು ಮರಳಿ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಕುಟುಂಬದವರು ಖರೀದಿಸಿದ ಬಂಗಾರಿದ ರಶೀದಿಗಳನ್ನು ಹಾಜರು ಪಡಿಸಿರುತ್ತಾರೆ

ಎಂದರೆ ಸೃಷ್ಟಿಸಿ ಹಾಜರು ಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಮದುವೆ ಖರ್ಚನ್ನು ಅರ್ಜಿದಾರ ಕುಟುಬಂದವರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರೆ ಸರಿ, ಈಗ ನಿವೃತ ಹೊಂದಿರುತ್ತಾರೆ ಎಂದರೆ ಸರಿ. ನನ್ನ ಊರು ಚಿಂಚೋಳಿ ತಾಲೂಕಿನ ಅನ್ವರ ಇರುತ್ತದೆ. ಶಹಾಪುರದಲ್ಲಿ ನನ್ನ ಸ್ವಂತ ಮನೆ ಇರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯ ಮನೆ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಕಿರಾಣಿ ಅಂಗಡಿ ಇರುತ್ತದೆ ಎಂದರೆ ಸರಿಯಲ್ಲ, ನನ್ನ ತಾಯಿ ಹೋಲ್ ಸೇಲ್ ಸೀರೆ ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಪಿಂಚಣಿ ಬರುತ್ತದೆ ಎಂದರೆ ಸರಿ, ನನ್ನ ತಮ್ಮನ ಕುಟುಂಬ ಬೇರೆಯಾಗಿ ವಾಸವಾಗಿದೆ ಎಂದರೆ ಸರಿ. ನನ್ನ ತಂದೆಯ ಹೆಸರಿಗೆ 2 ಎಕರೆ ಜಮೀನು ಇರುತ್ತದೆ, ಅದರ ವಾರ್ಷಿಕ ಆಧಾಯ 8 ರಿಂದ 10 ಲಕ್ಷ ಇರುತ್ತದೆ ಎಂದರೆ ಸರಿಯಲ್ಲ. 2016-2017 ರಲ್ಲಿ ನಾನು ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೇ, 2019 ರಿಂದ ನಾನು ಕೆಲಸ ಮಾಡುತ್ತಿಲ್ಲ. ನನಗೆ ಸಾಕಷ್ಟು ಆಧಾಯ ಇರುತ್ತದೆ, ಆಸ್ತಿ ಇರುತ್ತದೆ, ನನ್ನ ತಂದೆ ತಾಯಿಯ ಜವಾಬ್ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಮೊಬೈಲ ಅಂಗಡಿಯಲ್ಲಿ ಕೆಲಸ ಮಾಡುತ್ತೇನೆ, ನನಗೆ 25 ರಿಂದ 30 ಸಾವಿರ ಸಂಬಳ ಇರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರಿಗೆ ಜೀವನಾಂಶ ಹಾಗೂ ನನ್ನ ಮಗನ ವಿದ್ಯಾಭ್ಯಾಸ ಖರ್ಚು ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಜ್ಯೋತಿಗೆ ಹಾಗೂ ನನ್ನ ಮಗನಿಗೆ ಈ ಅರ್ಜಿ ಸಲ್ಲಿಸಿದ ದಿನದಿಂದ ಜೀವನಾಂಶವನ್ನು ಕೊಟ್ಟಿರುವುದಿಲ್ಲ. 2014 ರಲ್ಲಿ ನಾನು ವಿಚ್ಛೇದನ ಸಲುವಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ, ಅದರಲ್ಲಿ ನಾನು ಜೀವನಾಂಶ ಕೊಟಿರುವುದಿಲ್ಲ. ಜ್ಯೋತಿ ಮತ್ತೊಂದು ಮದುವೆಯಾಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಿಚ್ಛೇದನ ಆದ ನಂತರ ನಾನು ಮದುವೆಯಾಗಿರುತ್ತೇನೆ, ನನಗೆ ಎರಡನೇ ಮದುವೆಯಿಂದ ಇಬ್ಬರು ಮಕ್ಕಳು ಇರುತ್ತಾರೆ. ಅವರು ಖಾಸಗಿ ಶಾಲೆಯಲ್ಲಿ ಓದುತ್ತಿದ್ದಾರೆ ಎಂದರೆ ಸರಿ. ನಾನು ಗುಲ್ಬರ್ಗಾದಲ್ಲಿ ಮನೆ ಮಾಡಿರುತ್ತೇನೆ ಎಂದರೆ ಸರಿ. ನನ್ನ ಖರ್ಚು ವೆಚ್ಚವನ್ನು ನನ್ನ ಎರಡನೇ ಹೆಂಡತಿ ಟೇಲರಿಂಗ್ ಕೆಲಸ ಮಾಡಿ ನೋಡಿಕೊಳ್ಳುತ್ತಿದ್ದಾಳೆ. ಖಾಸಗಿ ಶಾಲೆಯಲ್ಲಿ ಲಕ್ಷಾಂತರ ರೂಪಾಯಿ ಕಟ್ಟಬೇಕಾಗುತ್ತದೆ ಎಂದರೆ ಸರಿಯಲ್ಲ. ನನಗೆ ಸಾಕಷ್ಟು ಆಧಾಯ ಇರುತ್ತದೆ, ನನ್ನ ಎರಡನೇ ಹೆಂಡತಿ ನನ್ನನ್ನು ನೋಡಿಕೊಳ್ಳುತ್ತಿದ್ದಾಳೆ ಎಂದರೆ ಸರಿಯಲ್ಲ.

**ಕ್ರಿ.ಮಿಸ್. ನಂ. 382 /2016**
**ಆರ್.ಡಬ್ಲೂ : 1**

ನನ್ನ ತಮ್ಮ ಕಳ್ಳತನ ಪ್ರಕರಣದಲ್ಲಿ ಜೇಲಿಗೆ ಹೋಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಜೋತಿಯವರ ದೊಡ್ಡಮ್ಮ ವಕೀಲರನ್ನು ನೇಮಿಸಿ ನನ್ನ ತಮ್ಮನಿಗೆ ಜಾಮೀನು ಪಡೆದುಕೊಳ್ಳಲು ಸಹಾಯ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನನ್ನ ತಮ್ಮ ಜೇಲಿನಲ್ಲಿ ಇದ್ದ ಎಂದರೆ ಸರಿ. ನನ್ನ ಹಾಗೂ ಜೋತಿ ಮದುವೆ ದಿನದಂದೇ ನನ್ನ ತಮ್ಮ ಬಿಡುಗಡೆ ಆಗಿರುತ್ತಾನೆ ಎಂದರೆ ನನಗೆ ಈಗ ನೆನಪಿಲ್ಲ, ನನ್ನ ತಮ್ಮನ್ನು ಹೊರಗೆ ಬಂದ ನಂತರ ಮದುವೆಯಾಗಿರುತ್ತೇನೆ ಎಂದು ಹೇಳಿದ್ದರಿಂದ ಅವರು ಬಿಡಿಸುವ ವ್ಯವಸ್ಥೇ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಹಾಗೂ ಜೋತಿ ಮದುವೆಯಾದ ನಂತರ ಗುಲ್ಬರ್ಗಾದಲ್ಲಿ 1 ತಿಂಗಳ ವರೆಗೂ ವಾಸವಾಗಿದ್ದೇವು. ನಂತರ ಶಹಾಪೂರಕ್ಕೆ ಬಂದಿರುತ್ತೇವೆ. Computer Institute ತೆಗೆಯಲು ಜೋತಿಯ ತಾಯಿ ಸಹಾಯ ಮಾಡಿರುತ್ತಾಳೆ ಎಂದರೆ ಸರಿಯಲ್ಲ. 5 ರಿಂದ 6 ಲಕ್ಷ ಜೋತಿಯ ತಾಯಿ ನಿವೇಶನ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನಾನು ಹಾಗೂ ಜೋತಿ ಚರ್ಚಿಸಿದ ನಂತರ Institute ಸಲುವಾಗಿ ಶಹಾಪೂರಕ್ಕೆ ಬಂದಿರುತ್ತೇವೆ ಎಂದರೆ ಸರಿಯಲ್ಲ.

**ವಕೀಲರ ಕೋರಿಕೆ ಮೇರೆಗೆ ಮುಂದುಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ.**
**ಶಹಾಪೂರ**